ಶ್ರೀ ಕೆ.ಜಿ. ಬೋಪಯ್ಯ : ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಜಿಲ್ಲಾಧಿಕಾರಿಗಳಿಗೆ ಒಂದು ಸೂಚನೆಯನ್ನು ಕೊಡಲಿ. ವರದಿಗೊಂದು ಸೂಚನೆ ಕೊಡಿ ಅಷ್ಟೆ, ಕಟಾವು ಮಾಡಿರುವ ಭತ್ತಕ್ಕೆ ಕೊಡವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ವಿಶ್ವೇಶ್ವರ ಹೆಗಡೆ ಕಾಗೇರಿಯವರು ಇದನ್ನು ಗಮನ ಸೆಳೆಯುವ ಸೂಚನೆಯಲ್ಲಿ ಕೊಟ್ಟಿದ್ದಾರೆ. ಇಡೀ ಜಿಲ್ಲೆಯ ಬಗ್ಗೆ ತೆಗೆದುಕೊಂಡರೆ ಮಾತನಾಡಬಹುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅಕಾಲಿಕ ಮಳೆಯಿಂದಾಗಿ ಎಲ್ಲಾ ಕಡೆ ಸಮಸ್ಯೆಯಾಗಿದೆ. ಅದಕ್ಕೊಂದು ಸಮಯ ನಿಗದಿ ಮಾಡಿ.

(ಗೊಂದಲ)

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೆ, ಸ್ವಲ್ಪವಾದರೂ ಕೂಡ ಚರ್ಚೆ ಮಾಡಬೇಕಾಗಿರುತ್ತದೆ. ಚರ್ಚೆ ಮಾಡಿದಾಗ ಮುಖ್ಯಮಂತ್ರಿಗಳು ಹಾಗೂ ಸಚಿವರು ಇರುತ್ತಾರೆ. ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ನಾಳೆ ಖಂಡಿತ ಮಾಡೋಣ.

ಶ್ರೀ ಡಿ.ಎನ್. ಜೀವರಾಜ್ : ನಿನ್ನೆ ಅವಕಾಶ ಕೊಟ್ಟು ಬಿಟ್ಟಿದ್ರಿ, ಅಷ್ಟರಲ್ಲಿ ಮಧ್ಯಾಹ್ನ ಆಯಿತು.

8. ಉತ್ತರ ಕರ್ನಾಟಕದ ಸರ್ವೋತೋಮುಖ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಂದುವರೆದ ಚರ್ಚೆ:–

ಶ್ರೀ ವಿಶ್ವನಾಥ ಚಂದ್ರಶೇಖರ ಮಾಮನಿ (ಸವದತ್ತಿ, ಯಲ್ಲಮ್ಮ): ದೇಶಕ್ಕೆ ಸ್ವಾತಂತ್ರ್ಯ ದೊರಕಿ 68 ವರ್ಷಗಳು ಕಳೆದರೂ ಸಹ ಈ ಅಖಂಡ ಕರ್ನಾಟಕ ಜಿಲ್ಲೆಯಲ್ಲಿ ಅಸಮಾನತೆಯ ಕೂಗು ಕೇಳಿ ಬರುತ್ತಿದೆ. ಅದರಲ್ಲಿಯೂ ಕೂಡ ವಿಶೇಷವಾಗಿ ಉತ್ತರ ಕರ್ನಾಟಕದ ಈ ಭಾಗದ ಅಭಿವೃದ್ಧಿಗೆ ಸಂಪೂರ್ಣವಾಗಿ ಕೊರತೆ ಕಾಣುತ್ತಿದೆ. ಆ ವಿಷಯದಲ್ಲಿ ನನಗೆ ತಿಳಿದ ಮಟ್ಟಿಗೆ ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ಅದರ ಜೊತೆಗೆ ಅಖಂಡ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರಾದಂತಹ ಜಗದೀಶ್ ಶೆಟ್ಟರ್ ಅವರು, ಮಾನ್ಯ ಶಾಸಕರಾದಂತಹ ವೈ.ಎಸ್.ವಿ. ದತ್ತರವರು ಮತ್ತು ಅನೇಕ ಹಿರಿಯ ಸದಸ್ಯರುಗಳು ವಿಧಾನಸಭೆಯ ಪ್ರಸಕ್ತ ಅಧಿವೇಶನದಲ್ಲಿ ಪ್ರಸ್ತಾವನೆಯನ್ನು ಮಂಡಿಸಿರುವುದನ್ನು ನೋಡಿದ್ದೇನೆ. ಅದರ ಜೊತೆಗೆ ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಗುಲ್ಬರ್ಗಾದಲ್ಲಿ ವಿಶೇಷವಾಗಿ ಸಚಿವ ಸಂಪುಟ ಸಭೆಯನ್ನು ನಡೆಸಿದಂತಹ ಸಂದರ್ಭ ಮತ್ತು ಹಾಲಿ ಇರುವಂತಹ ಸಿದ್ದರಾಮಯ್ಯನವರ ಸರ್ಕಾರವೂ ಸಹ ಇತ್ತೀಚೆಗೆ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆಯನ್ನು ನಡೆಸಿ ಆ ಭಾಗದಲ್ಲಿರತಕ್ಕಂತಹ ಅನೇಕ

ಅಭಿವೃದ್ಧಿಗಳಿಗೆ ಅನುದಾನದ ವಿಶೇಷ ಪ್ಯಾಕೇಜ್‌ನ್ನು ಘೋಷಣೆ ಮಾಡಿದೆ. ಆ ಒಂದು ಹಿನ್ನೆಲೆಯಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಮಾತನಾಡಬಯಸುತ್ತೇನೆ. ಯಾವ್ಯಾವ ಇಲಾಖೆಗಳಿಗೆ ಅನುದಾನವನ್ನು ಘೋಷಣೆ ಮಾಡಬೇಕು ಮತ್ತು ಅಖಂಡ ಕರ್ನಾಟಕದ ಅಭಿವೃದ್ಧಿಯ ಜೊತೆಯಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಅವಕಾಶ ಮಾಡಿಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ವಿಶೇಷವಾಗಿ ನಮ್ಮ ರಾಜ್ಯದಲ್ಲಿರತಕ್ಕಂತಹ ಜನತೆಯ ಕೂಗು ಏನೆಂದರೆ ಉಚಿತವಾದಂತಹ ವಿದ್ಯುತ್ ನೀಡುವುದು, ಶುದ್ಧವಾದಂತಹ ಕುಡಿಯುವ ನೀರನ್ನು ಒದಗಿಸುವುದು, ದಿನನಿತ್ಯ ಗ್ರಾಮಗಳಿಗೆ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಓಡಾಡಲು ಬೇಕಾದಂತಹ ರಸ್ತೆಯ ಅಭಿವೃದ್ಧಿ ಹಾಗೂ ಬಡತನ ರೇಖೆಯ ಕೆಳಗಿರುವಂತಹ ಕುಟುಂಬಗಳಿಗೆ ಮನೆಗಳನ್ನು ಒದಗಿಸುವಂತಹ ವ್ಯವಸ್ಥೆಯನ್ನು ಮಾಡಬೇಕು ಮತ್ತು ಈ ಕುಟುಂಬದ ಮಕ್ಕಳಿಗೆ ಅಂಗನವಾಡಿಯಿಂದ ಹಿಡಿದು ಶಾಲೆಯಲ್ಲಿ ಕಲಿಸುವಂತಹ ವಿದ್ಯಾಭ್ಯಾಸದವರೆಗೆ ಸಂಪೂರ್ಣವಾಗಿ ಸಹಕಾರವನ್ನು ಕೊಡುತ್ತಿದ್ದರು. ಮಾನ್ಯ ಕಾನೂನು ಸಚಿವರ ಗಮನಕ್ಕೆ ತರುವುದೇನೆಂದರೆ, ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಸುಮಾರು ಮೂರು ವರ್ಷಗಳ ಹಿಂದೆ ಅಂಗನವಾಡಿ ಶಿಕ್ಷಕರು ಮತ್ತು ಸಹಾಯಕರ ಹುದ್ದೆಯನ್ನು ಕರೆದಿದ್ದು, ಅದನ್ನು ಇಲ್ಲಿಯವರೆಗೂ ಆ ಪಟ್ಟಿಯನ್ನು final ಮಾಡಿರುವುದಿಲ್ಲ. ಅಂಗನವಾಡಿಗಳಲ್ಲಿ ಸಾಕಷ್ಟು ಶಿಕ್ಷಕರ ಮತ್ತು ಶಿಕ್ಷಕಿಯರ ಹಾಗೂ ಅದರ ಜೊತೆಯಲ್ಲಿ ಸಹಾಯಕರು ಕೊರತೆ ಇರುವುದು ಸಂಪೂರ್ಣವಾಗಿ ಕಂಡು ಬರುತ್ತಿದೆ. ಮಾನ್ಯ ಅಧ್ಯಕ್ಷರು ಈಗಾಗಲೇ ನಿರ್ಧರಿಸಿರುವ ಪ್ರಕಾರ ನೀರಾವರಿ ಇಲಾಖೆ ಬಗ್ಗೆ ಚರ್ಚಿಸಲು ವಿಶೇಷವಾಗಿ ಬೇರೆ ಅವಕಾಶವನ್ನು ಮಾಡಿಕೊಡುತ್ತಾರೆಂದು ಹೇಳಿರುತ್ತಾರೆ. ಆ ಸಮಯದಲ್ಲಿ ನೀರಾವರಿ ಬಗ್ಗೆ ಚರ್ಚೆ ಮಾಡಲು ಭಾಗವಹಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ತಿಳಿಸಬಯಸುತ್ತೇನೆ.

ಈಗಾಗಲೇ ನಮ್ಮ ಉತ್ತರ ಕರ್ನಾಟಕ ಪ್ರದೇಶದಲ್ಲಿ ರೈತರಿಗೆ ಬೇಕಾದಂತಹ ಉಚಿತ ವಿದ್ಯುತ್‌ನ್ನು ನೀಡುವುದರಲ್ಲಿ ಹಿಂದಿನ ಸರ್ಕಾರವಿರಬಹುದು ಅಥವಾ ಇಂದಿನ ಸರ್ಕಾರ ಕೊಡುವಂತಹ ಸಂದರ್ಭದಲ್ಲಿ ಅನೇಕ ಲಿಂಕ್ ಲೈನ್‌ಗಳು ಸುಮಾರು 35 ವರ್ಷಗಳ ಹಳೆಯದಾಗಿದ್ದು ಶಿಥಿಲಗೊಂಡಿರುವಂತಹ ಸಂದರ್ಭದಲ್ಲಿ ಸಾಕಷ್ಟು ಸಾರಿ ಲೈನ್‌ಗಳು ಕಟ್ಟಾಗಿ ಬಿದ್ದು, ಅಲ್ಲಿದ್ದಂತಹ ರೈತರ ಕಬ್ಬು ಸುಟ್ಟು ಹೋಗಿರುತ್ತದೆ. ಇದರ ಜೊತೆಗೆ ರೈತರ ಪ್ರಾಣ ಹಾನಿ, ಬೆಲೆ ಹಾನಿ ಕೂಡ ಆಗಿರುವಂತಹ ಸಂದರ್ಭ ಅತಿ ಹೆಚ್ಚಾಗುತ್ತಿರುವುದರಿಂದ ಲಿಂಕ್‌ಲೈನ್‌ಗಳ ಅಭಿವೃದ್ಧಿ ಮಾಡಬೇಕು ಅಥವಾ ಬದಲಾಯಿಸಬೇಕೆಂದು ಸರ್ಕಾರಕ್ಕೆ ಸದನದ ಮುಖಾಂತರ ಒತ್ತಾಯ ಮಾಡುತ್ತೇನೆ.

ಗ್ರಾಮೀಣ ರಸ್ತೆಗಳು ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಯೋಜನೆಯಡಿಯಲ್ಲಿರಬಹುದು, ಜಿಲ್ಲಾ ಪಂಚಾಯಿತಿ ರಸ್ತೆಗಳಿರಬಹುದು, ಲೋಕೋಪಯೋಗಿ ಇಲಾಖೆಯಲ್ಲಿರುವಂತಹ ಅನೇಕ

ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕೆನ್ನುವ ಮನವಿಯನ್ನು ಮಾಡುತ್ತಿದ್ದೇನೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಬೆಳಗಾವಿಯಿಂದ ರಾಯಚೂರಿಗೆ ಹೋಗುವಂತಹ ಸಂದರ್ಭದಲ್ಲಿ ಮುಖ್ಯವಾದಂತಹ ರಸ್ತೆಯಾದ ಯರಗಟ್ಟಿಯನ್ನು National Highway ಅನ್ನಾಗಿ ಪರಿವರ್ತಿಸಬೇಕೆಂದು ವಿನಂತಿಯನ್ನು ಸದನದ ಮುಖಾಂತರ ಸರ್ಕಾರಕ್ಕೆ ಮಾಡುತ್ತಿದ್ದೇನೆ.

ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾದಂತಹ ರೇಣುಕಾ ಯಲ್ಲಮ್ಮ ದೇವಸ್ಥಾನವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಬೇಕೆಂದು ಮಾನ್ಯ ಪ್ರವಾಸೋದ್ಯಮ ಸಚಿವರಲ್ಲಿ ವಿಶೇಷವಾಗಿ ವಿನಂತಿ ಮಾಡುತ್ತಿದ್ದೇನೆ. 2000ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿಯಲ್ಲಿ ನಡೆದಂತಹ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. 2011–12ನೇ ಸಾಲಿನಲ್ಲಿ ಕೆರೆ ಅಭಿವೃದ್ಧಿಗೆ ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 5 ಕೋಟಿ ರೂ.ಗಳನ್ನು ಪ್ರತಿ ಕ್ಷೇತ್ರಕ್ಕೆ ಘೋಷಿಸಿರುವಂತಹ ಸಂದರ್ಭದಲ್ಲಿ ಕೆರೆ ಅಭಿವೃದ್ಧಿ ಮಾಡಿದಂತಹ ಕಾಮಗಾರಿಗಳಿಗೆ ಅನುದಾನವೂ ಕೂಡ ಬಿಡುಗಡೆ ಆಗಿಲ್ಲ ಎನ್ನುವ ಪ್ರಸಂಗವೂ ಇದೆ.

ಧಾರವಾಡ ಜಿಲ್ಲೆಯ ಉಸ್ತುವಾರಿ ಸಚಿವರಾದಂತಹ ದಿನೇಶ್ ಗುಂಡೂರಾವ್ ಅವರ ಗಮನಕ್ಕೆ ತರಬಯಸುವುದೇನೆಂದರೆ, ಸವದತ್ತಿಯಿಂದ ಧಾರವಾಡಕ್ಕೆ ಹೋಗುವ ಮಾರ್ಗದಲ್ಲಿ, ಬರುವ ಸರಹದ್ದಿನಲ್ಲಿ ಮತ್ತು ಧಾರವಾಡದ ಶಹರದ ವ್ಯಾಪ್ತಿಯಲ್ಲಿ ಬರುವಂತಹ 4–5 ಕಿ.ಮೀ.ಗಳಷ್ಟು ರಸ್ತೆಗಳು.... ಸವದತ್ತಿ, ಧಾರವಾಡ ರಸ್ತೆ ಅಭಿವೃದ್ಧಿಯಾಗಿದ್ದು, ಅದರ ಜೊತೆಗೆ ಸವದತ್ತಿಯ ಸರಹದ್ದು ಮುಗಿದ ನಂತರ ಧಾರವಾಡ ನಗರಕ್ಕೆ ಪ್ರವೇಶವಾಗುವಂತಹ ಸಂದರ್ಭದಲ್ಲಿ ಸಾಕಷ್ಟು ರಸ್ತೆಗಳು ಹದಗೆಟ್ಟಿವೆ. ದಿನನಿತ್ಯ ಹುಬ್ಬಳ್ಳಿ ರೈಲ್ವೆ ನಿಲ್ದಾಣಕ್ಕೆ ಹೋಗುವ ರಸ್ತೆಗಳು ಹಾಗೂ ಧಾರವಾಡಕ್ಕೆ ಬರುವ ರಸ್ತೆಗಳು ಸಂಪೂರ್ಣವಾಗಿ ರಸ್ತೆಗಳು ಹದಗೆಟ್ಟಿದ್ದು, ಆದಷ್ಟು ಬೇಗನೆ ಆ ರಸ್ತೆಗಳು ಕಾರ್ಪೋರೇಷನ್ ವ್ಯಾಪ್ತಿಗೆ ಬಂದರೆ ಒಳ್ಳೆಯದು. ತಾವೂರಸ್ತೆಗಳ ಕಾಮಗಾರಿಗಳನ್ನು ಕಾರ್ಪೋರೇಷನ್ ಅನುದಾನದಲ್ಲಾಗಲಿ ಅಥವಾ ಸವದತ್ತಿ–ಧಾರವಾಡ ರಸ್ತೆಯ k-ship ರಸ್ತೆಯ ಅನುದಾನವೇನಿದೆ, ಅದರಲ್ಲಿ ಮಾಡುವಂತಹ ಪ್ರಯತ್ನವನ್ನು ತಾವು ಮಾಡಬೇಕೆಂದು ಸದನದ ಮುಖಾಂತರ ತಿಳಿಯ ಪಡಿಸುತ್ತಿದ್ದೇನೆ. ಇದರ ಜೊತೆಗೆ ಸವದತ್ತಿ–ಬಾದಾಮಿ –ಕಮಟಗಿ ರಸ್ತೆಯ ಕಾಮಗಾರಿಗೆ ಹಿಂದೆಯೇ ಟೆಂಡರ್ ಅನುಮೋದನೆಗೊಂಡಿದ್ದು, ಇದುವರೆವಿಗೂ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ. ರಸ್ತೆಗಳೆಲ್ಲವೂ ಸಾಕಷ್ಟು ಹದಗೆಟ್ಟಿವೆ. ರಾಮದುರ್ಗ ಕ್ಷೇತ್ರದ ಮಾನ್ಯ ಶಾಸಕರು ಹಾಗೂ ಮುಖ್ಯ ಸಚೇತಕರಾದ ಅಶೋಕ್ ಪಟ್ಟಣ್ ಅವರಿಗೂ ಈ ಬಗ್ಗೆ ಗೊತ್ತಿದೆ. ಈ ಬಗ್ಗೆ ಅವರಿಗೆ ಬಹಳ ಒತ್ತಾಯ ಮಾಡಿದ ಕಾರಣದಿಂದ ಮುಖ್ಯ ಸಚೇತಕರಾದ ಅಶೋಕ್ ಪಟ್ಟಣ ಅವರು ಸರ್ಕಾರದ ಮೇಲೆ ಒತ್ತಡವನ್ನು ತಂದು ಈಗಾಗಲೇ ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕೆ 5 ಕೋಟಿ ರೂ.ಗಳ ಅನುದಾನ ಬಿಡುಗಡೆ

ಮಾಡಿಸಿರುವುದಕ್ಕೆ ಈ ಸಂದರ್ಭದಲ್ಲಿ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಅದಷ್ಟು ಬೇಗನೆ ಸವದತ್ತಿ–ಬಾದಾಮಿ–ಕಮಟಗಿ ರಸ್ತೆಯನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಿಲ್ಲದ ಕಾರಣ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ.

ಉತ್ತರ ಕರ್ನಾಟಕದ ಜಿಲ್ಲೆಯಲ್ಲಿ ಸಾರಿಗೆ ಇಲಾಖೆ ಯಾವ ರೀತಿ ನಡೆಯುತ್ತಿದೆ, ನಡೆದು ಬಂದ ದಾರಿಯನ್ನು ಈಗಾಗಲೇ ಪ್ರಸ್ತುತವಾಗಿ ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಿರುತ್ತಾರೆ. ಅದರ ಬಗ್ಗೆ ಹೇಳುವುದಾದರೆ ಮೂಲಭೂತವಾಗಿ ವಾಯುವ್ಯ ಕರ್ನಾಟಕ ಸಾರಿಗೆ ಏನಿದೇ ಅದನ್ನು ಮನರುಜ್ಜೀವನಗೊಳಿಸುವುದಕ್ಕೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸುಮಾರು 50–100 ಕೋಟಿ ರೂ.ಗಳ ಸಹಾಯ ಧನವನ್ನು ನೀಡುತ್ತಾರೆ. ಆದರೆ ಎಲ್ಲಾ ಆಡಳಿತಾತ್ಮಕವಾಗಿ ನಮ್ಮ ತಾಲ್ಲೂಕು ಬೆಳಗಾವಿ ಜಿಲ್ಲೆಯಲ್ಲಿದೆ. ಸಾರಿಗೆ ಇಲಾಖೆ ಮಾತ್ರ ಧಾರವಾಡ ಜಿಲ್ಲೆಯ ಡಿ.ಸಿ.ವ್ಯಾಪ್ತಿಗೆ ಬರುವುದರಿಂದ ಅಲ್ಲಿರತಕ್ಕಂತಹ ಎಲ್ಲಾ ಬಸ್ಸುಗಳು, ವಿಶೇಷವಾಗಿ ನನ್ನ ಕ್ಷೇತ್ರವೊಂದೇ ಅಲ್ಲದೇ ಉತ್ತರ ಕರ್ನಾಟಕದ ಎಲ್ಲಾ ಬಸ್ಸುಗಳು ಸುಮಾರು 4 ಲಕ್ಷ, 2 ಲಕ್ಷ, 3 ಲಕ್ಷ, ಕಿ.ಮೀ ಸಂಚರಿಸಿದಂತಹ ಬಸ್ಸುಗಳನ್ನು ಮತ್ತು ಬೆಂಗಳೂರಿನಲ್ಲಿ ಸಂಚರಿಸಿದಂತಹ ಬಸ್ಸುಗಳನ್ನು ಕೊಡುತ್ತಾರೆ.

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ ಹಳೆಯ ಬಸ್ಸುಗಳನ್ನು ಯಾವತ್ತೂ ಕೊಟ್ಟಿರುವುದಿಲ್ಲ. 4 ಕಾರ್ಪೋರೇಷನ್‌ಗಳೂ ಅವರವರೇ purchase ಮಾಡುತ್ತಾರೆ.

ಶ್ರೀ ವಿಶ್ವನಾಥ್ ಚಂದ್ರಶೇಖರ ಮಾಮನಿ: ಅಕಸ್ಮಾತ್ ಆಗಿ ನೀವು ಕೊಟ್ಟಿರಲಿಲ್ಲವೆಂದರೆ, ಮಾನ್ಯ ಸದಸ್ಯರೆಲ್ಲರೂ ಮಾತನಾಡುವಂತಹ ಸಂದರ್ಭದಲ್ಲಿ ನಮ್ಮಲ್ಲಿ ಸಾಕಷ್ಟು ಹಳೆಯ ಬಸ್ಸುಗಳಿದವು. ಸಂಪೂರ್ಣವಾಗಿ ಶಿಥಿಲಗೊಂಡಿರುವ ಬಸ್ಸುಗಳಿವೆ. ಆ ಬಸ್ಸುಗಳನ್ನು ವಿಶೇಷವಾಗಿ ಉತ್ತರ ಕರ್ನಾಟಕ ಭಾಗದ ಬೆಳಗಾವಿ ಜಿಲ್ಲೆಯಲ್ಲಿ ನೋಡುವಂತಿದೆ. ನಾವು ಧಾರವಾಡದ ಜಿಲ್ಲಾಧಿಕಾರಿಗಳಿಗೆ ಮತ್ತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಮಾಡಿಕೊಂಡು ಬೆಂಗಳೂರಿನಲ್ಲಿ ರಾಜಹಂಸ ಬಸ್‌ಗಳನ್ನು ಕೊಟ್ಟಿದ್ದು, ಆ ಬಸ್ಸುಗಳು ಎರಡು ಲಕ್ಷ ಕಿ.ಮೀ. ವರೆಗೆ ಸಂಚರಿಸಿದ್ದು ಸಂಪೂರ್ಣವಾಗಿ ಹದಗೆಟ್ಟಿರುವ ಬಸ್ಸುಗಳನ್ನು ನೀಡಿರುತ್ತಾರೆ. ಆದ ಕಾರಣ ದಯಮಾಡಿ ಹೊಸ ಬಸ್ಸುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು.

ಮಾನ್ಯ ಅಧ್ಯಕ್ಷರೆ, ದೇವರಾಜ್ ಅರಸು ಅಭಿವೃದ್ಧಿ ನಿಗಮದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಯೋಜನೆಗಳ ಬಗ್ಗೆ ಮಾತನಾಡಬೇಕಾದರೆ, ಈ ಹಿಂದೆ ಇದ್ದಂಥ ಸರ್ಕಾರ ಇರಬಹುದು, ಇವತ್ತಿರುವ ಸರ್ಕಾರ ಇರಬಹುದು ದೇವರಾಜ್ ಅರಸು ಅಭಿವೃದ್ಧಿ ನಿಗಮ ಮತ್ತು ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವುಗಳಲ್ಲಿ ಏನಾಗುತ್ತಿದೆ ಎಂದರೆ, ಈ ಅಂಬೇಡ್ಕರ್ ಅಭಿವೃದ್ಧಿ

ನಿಗಮದಲ್ಲಿ ವಿಶೇಷವಾಗಿ ಈ ಸರ್ಕಾರ ಬಂದ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಯೋಜನೆ, ಅವರ ಕಲ್ಯಾಣಕ್ಕಾಗಿ ಏನು ಅನುದಾನವನ್ನು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ನಂತರ ಅವುಗಳ ಸಾಲಗಳನ್ನು ಮನ್ನಾ ಮಾಡಿರುವುದನ್ನು ನಾನು ಸ್ವಾಗತವನ್ನು ಮಾಡುತ್ತಾ, ಈಗ ನೀವು ಏನು ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ವೈಯಕ್ತಿಕ ಸಾಲ ಮತ್ತು ಗುಂಪು ಯೋಜನೆ, ಕೊಳವೆ ಬಾವಿ ಯೋಜನೆ, ಸ್ವ–ಸಹಾಯ ಸಂಘಗಳಿಗೆ ಏನು ಕೊಡುತ್ತಿದ್ದೀರಿ, ಅದರಲ್ಲಿ ನಮಗೆ 55, 57, 58 ಯೂನಿಟ್‌ಗಳನ್ನು ಮಂಜೂರು ಮಾಡತಕ್ಕಂಥದ್ದನ್ನು ಕೊಡುತ್ತೀರಿ. ಆದರೆ, ನಮಗೆ 1,100 ಅರ್ಜಿಗಳು ಬರುತ್ತವೆ. ಆ ಅರ್ಜಿಗಳು ಕೊಡತಕ್ಕ ಮಿತಿ ವ್ಯಾಪ್ತಿ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳಿಗೆ ಇರುತ್ತದೆ. ಇಡೀ ರಾಜ್ಯದಲ್ಲಿ ಇದೇ ರೀತಿ ಇರಬೇಕೆನ್ನುವುದು ನನ್ನ ಭಾವನೆ. ನನಗೆ ಮಾಹಿತಿ ಬಂದ ಪ್ರಕಾರ, ಜಿಲ್ಲಾಧಿಕಾರಿಗಳಲ್ಲಿ ನಿಮ್ಮ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಅರ್ಜಿಗಳನ್ನು ಕೊಡುತ್ತಾರೆ. ಕೊಟ್ಟಿದ್ದಾರೆ. 57, 58 ಯೂನಿಟ್ ಇರುತ್ತವೆ. ಅವುಗಳಿಗೆ 1,000 ಅರ್ಜಿಗಳು ಬರುತ್ತವೆ. ನಿಮ್ಮ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ನಿಮ್ಮ ಶಾಸಕರ ಹತ್ತಿರ ಹೋಗಿ, ಅವರಿಂದ ಠರಾವು ಮಾಡಿಸಿಕೊಂಡು ಬನ್ನಿ ಎಂದು ಹೇಳಿ ಕಳುಹಿಸುತ್ತಾನೆ. ನಾವು ಸಾವಿರ ಅರ್ಜಿ ಬಂದ ಸಂದರ್ಭದಲ್ಲಿ 50 ಜನರನ್ನು ಹೇಗೆ ಸಮಾಧಾನ ಮಾಡುವುದು? ಎನ್ನುವಂಥ ಪ್ರಶ್ನೆ. ದೇವರಾಜ್ ಅರಸ್ ಅಭಿವೃದ್ಧಿ ನಿಗಮದ್ದೂ ಅದೇ ರೀತಿ ಆಗುತ್ತಿದೆ. ಅಂಬೇಡ್ಕರ್ ಅಭಿವೃದ್ಧಿ ನಿಗಮದ್ದು ಅದೇ ರೀತಿ ಆಗುತ್ತಿದೆ. ಅದಕ್ಕೆ ಪರಿಹಾರವನ್ನು ಕಲ್ಪಿಸಬೇಕು. ಇಲ್ಲವೇ ಆ form ಗಳನ್ನು ಕೊಡುವಂಥದ್ದು 1:2 ಆಗಬೇಕು. ಒಂದಕ್ಕೆ ಎರಡರಂತೆ ಕೊಡುವಂಥ ವ್ಯವಸ್ಥೆ ಮಾಡಬೇಕು. ಇದರಿಂದ ರಾಜ್ಯದಲ್ಲಿರುವಂಥ ಎಲ್ಲಾ 225 ಶಾಸಕರಿಗೆ ಕನಿಷ್ಠವಾದ ತೊಂದರೆ ಆಗುತ್ತಿದೆ. ಆದ್ದರಿಂದ, ನಾನು ದಯಮಾಡಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾಲ್ಲೂಕುವಾರು ಯೋಜನೆಗಳನ್ನು ಡಾ: ಡಿ.ಎಂ. ನಂಜುಂಡಪ್ಪ ವರದಿಯಾಗಲಿ, general ಆಗಲಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳುತ್ತೀರಿ, ಅದಕ್ಕೆ 1:2 ಅರ್ಜಿಗಳನ್ನು ಕೊಡಿಸುವಂಥ ಕೆಲಸವನ್ನು ಮಾಡಿ. ಮುಂದಿನ ದಿನಗಳಲ್ಲಿ ಶಾಸಕರನ್ನು ಮುಜುಗರಕ್ಕೊಳಪಡಿಸುವಂಥದ್ದು ಆಗಬಾರದು. ಇಲ್ಲಿ ಸಣ್ಣ ನೀರಾವರಿ ಸಚಿವರು ಇಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನನ್ನ ವೈಯಕ್ತಿಕ ಕ್ಷೇತ್ರದ ಪ್ರಕಾರ, ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಯೋಜನೆಗಳಿಗೆ ಏನು ಶಾಸಕರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡಿಸಿ ಠರಾವನ್ನು ತರಿಸಿ ಪತ್ರವನ್ನು ಕೊಟ್ಟಂಥ ಸಂದರ್ಭ, ಆ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿದ್ದಂಥ ಎಲ್ಲಾ ಕೊಳವೆ ಬಾವಿ ಯೋಜನೆಯ ಫಲಾನುಭವಿಗಳನ್ನು ಬದಲಾವಣೆ ಮಾಡಿ, ಈ ರಾಜ್ಯದ ಅಧಿಕಾರಿಗಳು ಅಲ್ಲಿಯೇ ಒಂದು ನಿರ್ಣಯ ಮಾಡಿ ಕಳುಹಿಸಿದ್ದಾರೆ. ದಯಮಾಡಿ, ಆ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ

ನಡೆಯುವಂತಹ ಯೋಜನೆಯನ್ನು ಅದರಲ್ಲಿಯೇ ಮುಂದುವರೆಸುವ ಯೋಜನೆ ಮಾಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಆರೋಗ್ಯ ಇಲಾಖೆ ಬಗ್ಗೆ ಮಾತನಾಡಬೇಕಾದರೆ, ಉತ್ತರ ಕರ್ನಾಟಕದಲ್ಲಿ ಆರೋಗ್ಯ ಇಲಾಖೆ ಬಗ್ಗೆ ಬಹಳ ತೊಂದರೆ ಇದೆ. ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಾಗಲಿ, ಜಿಲ್ಲಾ ಆಸ್ಪತ್ರೆಗಳಲ್ಲಾಗಲಿ ವೈದ್ಯರು ಇದ್ದರೂ ಕೂಡ ಅವರಿಗೆ ವಸತಿ ಯೋಜನೆ ಬಹಳ ತೊಂದರೆ ಇದೆ. 1970–75 ರಲ್ಲಿ ಕಟ್ಟಿದಂಥ ಆಸ್ಪತ್ರೆಗಳ ಜೊತೆ ಇದ್ದ quarters ಕೂಡ ಇವೆ. ಅದಕ್ಕೆ ಆಸ್ಪತ್ರೆಗಳಲ್ಲಿರತಕ್ಕಂಥ ವೈದ್ಯರುಗಳಿಗೆ quarters ಕೊಡಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ವಿಶೇಷವಾಗಿ, ಈ ಉತ್ತರ ಕರ್ನಾಟಕದಲ್ಲಿ ಕೃಷಿ ಬಗ್ಗೆ, ಕೃಷಿ ಬೆಳೆಗಳ ಬಗ್ಗೆ, ಕೃಷಿ ರೈತನ ಬಗ್ಗೆ, ಕಬ್ಬು ಬೆಳೆಗಾರರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದಾಗ ನಮ್ಮ ನಾಯಕರುಗಳು, ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಕ್ಕರೆ ಸಚಿವರು ಕಬ್ಬಿನ ಬೆಳೆ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಅದು ಸರ್ಕಾರದ ಜವಾಬ್ದಾರಿ ಎಂದು ನಾನು ಭಾವಿಸುತ್ತೇನೆ. ಉತ್ತರ ಕರ್ನಾಟಕದಲ್ಲಿ ಬೆಳೆಯುವಂಥ ಪ್ರತಿಯೊಂದು ಬೆಳೆಗೆ ಇವತ್ತು ಸರ್ಕಾರ ಬೆಂಬಲ ಬೆಲೆಯನ್ನು ಘೋಷಿಸಬೇಕು. ವಿಶೇಷವಾಗಿ, ಗೋವಿನ ಜೋಳದ ಬಗ್ಗೆ ಇವತ್ತು ಅನೇಕ ಆಡಳಿತ ಪಕ್ಷದ ನಾಯಕರು ಮಾತನಾಡಿದ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ಮೇಲೆ ಬೊಟ್ಟು ಮಾಡಿ ತೋರಿಸಿರುವುದರಿಂದ ನಮ್ಮ ವಿರೋಧ ಪಕ್ಷದ ನಾಯಕರು ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋಗಿ ಗಮನವನ್ನು ಸೆಳೆದು ಉತ್ತರ ಕರ್ನಾಟಕದಲ್ಲಿ ಬೆಳೆಯತಕ್ಕ ಕಬ್ಬು ಮತ್ತು ಹತ್ತಿಗೆ ವಿಶೇಷವಾಗಿ ಒತ್ತನ್ನು ಕೊಟ್ಟು ಕೇಂದ್ರದಿಂದ ಖರೀದಿ ಮಾಡಿಸುವಂತ ವ್ಯವಸ್ಥೆಯನ್ನು ಮಾಡಬೇಕು. ಕೃಷಿ ಉತ್ಪನ್ನ ಮಾರುಕಟ್ಟೆಗಳ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ಕೃಷಿ ಉತ್ಪನ್ನಗಳ ಮಾರುಕಟ್ಟೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಅಲ್ಲಿ ಪ್ರಾಂಗಣದ ವ್ಯವಸ್ಥೆಯನ್ನು ವಿಶೇಷವಾಗಿ ಮಾಡಬೇಕಾಗುತ್ತದೆ. ಅಲ್ಲಿ ತೂಕ ಮಾಡಲು ಈಗಾಗಲೇ ಆಧುನೀಕರಣ computerized ವ್ಯವಸ್ಥೆ ಮಾಡಿರುವುದರಿಂದ ಅದು ಒಂದು ಒಳ್ಳೆಯ ಯೋಜನೆ. ಕೃಷಿ ಮಾರುಕಟ್ಟೆಯನ್ನು ಅಭಿವೃದ್ಧಿ ಮಾಡುವುದರಿಂದ ಅಲ್ಲಿರತಕ್ಕಂಥ ರೈತ ಬಂದರೆ ಪ್ರೀತಿ–ವಿಶ್ವಾಸದಿಂದ ವ್ಯಾಪಾರ ಮಾಡಿ ತಂದಂಥ ಉತ್ಪನ್ನಗಳನ್ನು ಮಾರಾಟ ಮಾಡಿ ತೆಗೆದುಕೊಂಡು ಹೋಗುವಂಥ ವ್ಯವಸ್ಥೆ ಆಗುತ್ತದೆ. ದೇಶದ ಬೆನ್ನೆಲುಬಾಗಿ ಯಾವ ರೈತ ದೇಶಕ್ಕೆ ಅನ್ನ ಕೊಡುವಂಥ ಸಂದರ್ಭ ಇದೆ, ಅದಕ್ಕೆ ಬೆನ್ನೆಲುಬಾಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿರತಕ್ಕಂಥ ಹಮಾಲಿ ಕೂಲಿಗಾರರು ಏನು ಇದ್ದಾರೆ, ಅವರು ಕೂಲಿ ಮಾಡಿದಾಗ ಮಾತ್ರ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿದ್ದಂಥ ಮಾಲಿನ ಮಾರಾಟ ಮತ್ತು ತೂಕದ ವ್ಯವಸ್ಥೆ, ಅನೇಕ ಮೂಲಭೂತ ಸೌಲಭ್ಯಗಳು ಹಮಾಲಿಗಳಿಗೆ ಸಿಗುವಂತೆ ಆಗುತ್ತದೆ. ಅವರಿಗೆ ಮೊದಲು ಮೂಲಭೂತವಾಗಿ ಮನೆಗಳ ಸೌಲಭ್ಯ, ಈ ರೀತಿ ಮೂಲಭೂತ ಸೌಲಭ್ಯ ಕೊಡಿಸಬೇಕು. ಅವರಿಗೆ ಅಪಘಾತವಾದಂಥ ಸಂದರ್ಭದಲ್ಲಿ

ಕೃಷಿ ಮಾರುಕಟ್ಟೆ ಸಮತಿಯಿಂದ ಅವರಿಗೆ insurance ಕೊಡಿಸುವಂಥ ವ್ಯವಸ್ಥೆ ಮಾಡಬೇಕು. ವಿಶೇಷವಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಬೆಲೆ ಬಗ್ಗೆ ಮಾತನಾಡಬೇಕೆಂದರೆ, ಕೃಷಿ ಬೆಳೆ ಬೆಳೆಯತಕ್ಕ ಸಂದರ್ಭದಲ್ಲಿ ಸರ್ಕಾರ ವಿಶೇಷವಾಗಿ ಮುತುವರ್ಜಿ ವಹಿಸಿ ಅಲ್ಲಿ ಮಳೆ ಆಧಾರಿತ ಇರಬಹುದು, ನೀರಾವರಿ ಆಧಾರಿತವಾಗಿರತಕ್ಕಂಥ ಮಲಪ್ರಭ ಅಚ್ಚುಕಟ್ಟು ಹೀಗೆ ಯಾವುದೇ ಆದರೂ ಕೂಡ ಕರ್ನಾಟಕ ಅಚ್ಚುಕಟ್ಟು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರತಕ್ಕ ಬೆಳೆಗಳನ್ನು ಬೆಳೆಯತಕ್ಕ ಸಂದರ್ಭದಲ್ಲಿ ಆ ಬೆಳೆಯ pattern ಅನ್ನು ಘೋಷಣೆ ಮಾಡಬೇಕು. ಇಷ್ಟು ಎಕರೆ ಕಬ್ಬು ಹಾಕಬೇಕು. ರೈತರು ಕೇಳದಿದ್ದರೂ ಕೂಡ ವ್ಯವಸ್ಥಿತವಾಗಿ ಬೆಳೆ ಬೆಳೆಯುವಂಥ pattern ಅನ್ನು ಹಾಕಿಸಬೇಕು ಮತ್ತು ಅದಕ್ಕೆ ವೈಜ್ಞಾನಿಕವಾಗಿ ಬೆಳೆಯನ್ನು ಕೊಡಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ವಿಶೇಷವಾಗಿ ಹೇಳುತ್ತೇನೆ. ಹೊಸ ಸರ್ಕಾರ ಬಂದ ನಂತರ ತಾವು ಏನು ಸುವರ್ಣ ಗ್ರಾಮ ವಿಕಾಸ ಯೋಜನೆಯನ್ನು ಮಂಜೂರು ಮಾಡಿದ್ದೀರಿ, ಅದಕ್ಕೆ ಈಗಾಗಲೇ 1,000 ಜನಸಂಖ್ಯೆ ಇದ್ದಂಥದ್ದು ಗರಿಷ್ಠ 5,000 ಜನಸಂಖ್ಯೆ ಆಗಿದೆ. ಒಂದು ಸುವರ್ಣ ಗ್ರಾಮವಿಕಾಸ ಯೋಜನೆಯಡಿಯಲ್ಲಿ ಒಂದು ಹಳ್ಳಿಗೆ 75 ಲಕ್ಷ ರೂ.ಗಳನ್ನು ನಿಗದಿ ಮಾಡಿ ಆದೇಶವನ್ನು ಹೊರಡಿಸಿದ್ದೀರಿ. 3 ವರ್ಷಗಳ ಕಾಲ 75 ಲಕ್ಷ ರೂ.ಗಳು ಎಂದು ಇದೆ. ಅದನ್ನು ಪ್ರತಿ ವರ್ಷವೂ ಕೂಡ ಮಾಡಬೇಕು. ಪ್ರತಿ ವರ್ಷ ಸುಮಾರು 5 ಗ್ರಾಮಗಳನ್ನು ಸುವರ್ಣ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಕೈಗೊಳ್ಳಬೇಕೆಂದು ಈ ವೇದಿಕೆ ಮೂಲಕ ತಮಗೆ ತಿಳಿಯಪಡಿಸುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳೆ ಹಾಗೂ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳೇ, ಇವತ್ತಿನವರೆಗೆ ಸರ್ಕಾರ ಬಂದು 20 ತಿಂಗಳು ಆದರೂ ಕೂಡ ಪುರಸಭೆಯಲ್ಲಿ SFC ಅನುದಾನ ಮತ್ತು ನಗರೋತ್ಥಾನದ ಟೆಂಡರ್ ಆಗಿಲ್ಲ. ಮರಸಭೆ ಬೆಳಗಾಂ ಜಿಲ್ಲೆಯಲ್ಲಿ ಟೆಂಡರ್ ಆಗಿಲ್ಲ. ಹೊಸ S.R ಪ್ರಕಾರ ಟೆಂಡರ್‌ಗಳನ್ನು ಮಾಡಿ ಕಳುಹಿಸಿದರೆ, ಜಿಲ್ಲಾಧಿಕಾರಿಗಳು ಆದಕ್ಕೆ ಗುತ್ತಿಗೆದಾರರು ಒಪ್ಪುತ್ತಿಲ್ಲವೆಂದು ಅದನ್ನು ಸರ್ಕಾರ ಮಟ್ಟಕ್ಕೆ ಕಳುಹಿಸಿದ್ದಾರೆ. ಆದಷ್ಟು ಬೇಗನೆ ನಗರೋತ್ಥಾನದ ಟೆಂಡರ್ ಗುತ್ತಿಗೆಯನ್ನು clear. ಮಾಡಬೇಕು. ಪ್ರತಿ ವರ್ಷ ಮುಖ್ಯಮಂತ್ರಿಗಳು SFC ಅನುದಾನವನ್ನು ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ರಾಜ್ಯದಲ್ಲಿರತಕ್ಕಂಥ ಗ್ರಾಮ ಪಂಚಾಯಿತಿಗಳು ಯಾವ ಪಟ್ಟಣ ಪಂಚಾಯಿತಿಗಳಾಗಿ ಅಭಿವೃದ್ಧಿ ಆಗಲು ಅಥವಾ ಮೇಲ್ದರ್ಜೆಗೆ ಏರಿಸಲು ಅವಕಾಶ ಇದೆ, ಅವುಗಳನ್ನು ಪಟ್ಟಣ ಪಂಚಾಯಿತಿಯಾಗಿ ವರ್ಗೀಕರಣ ಮಾಡಿ, ಅವುಗಳ up-gradation ಮಾಡಬೇಕು. ಪಟ್ಟಣ ಪಂಚಾಯಿತಿಗಳು ಇರುವುದನ್ನು ನಗರಸಭೆ ಮತ್ತು ಪುರಸಭೆಗಳನ್ನಾಗಿ ಮಾಡಬೇಕು. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿರತಕ್ಕಂಥ ಒಟ್ಟಾರೆ ರಾಜ್ಯದಲ್ಲಿ 43 ತಾಲ್ಲೂಕುಗಳನ್ನು ಘೋಷಣೆ ಮಾಡಿದಂಥ ಸಂದರ್ಭದಲ್ಲಿ ಅದರ ಜೊತೆಗೆ,

ವಿಶೇಷವಾಗಿ ಅದರಲ್ಲಿರತಕ್ಕಂಥ 43 ತಾಲ್ಲೂಕುಗಳಲ್ಲಿ ಉತ್ತರ ಕರ್ನಾಟಕದಲ್ಲಿಯೇ 36 ತಾಲ್ಲೂಕುಗಳು ಇರುವುದರಿಂದ ಪತ್ರಿಕೆಯಲ್ಲಿ ಹೇಳಿಕೆ ನೀಡುವ ಮೂಲಕ ಮಾನ್ಯ ಕಂದಾಯ ಸಚಿವರು ಸ್ಪಂದಿಸಿದ್ದಾರೆ. ಬರುವ ಅಧಿವೇಶನದಲ್ಲಿ ಹೊಸ ತಾಲ್ಲೂಕುಗಳ ಘೋಷಣೆಯೊಂದಿಗೆ ಅವುಗಳಿಗೆ ಅನುದಾನದ ನಿರೀಕ್ಷೆಯಲ್ಲಿದ್ದೇವೆ. ಈ 43 ತಾಲ್ಲೂಕುಗಳನ್ನು ಘೋಷಣೆ ಮಾಡುವ ಸಂದರ್ಭದಲ್ಲಿ ನನ್ನ ಮತ ಕ್ಷೇತ್ರ ಅತಿ ಹಿಂದುಳಿದ ತಾಲ್ಲೂಕು ಆಗಿರುವುದರಿಂದ ಯರಗಟ್ಟಿಯನ್ನು ತಾಲ್ಲೂಕಾಗಿ ಘೋಷಣೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ದೇವರಾಜ್ ಅರಸ್ ಅಭಿವೃದ್ಧಿ ನಿಗಮ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ನಿಗಮಗಳಿಗೆ ಏನು ಸ್ಥಳ ಕೊಡುವ ವಿಷಯದಲ್ಲಿ ಅಲ್ಲಿರತಕ್ಕ ಮುಖ ಬೆಲೆಗೆ ಅಲ್ಲಿರತಕ್ಕ Sub Registrar value ಯಿಂದ ನಾವು ಏನು ತೆಗೆದುಕೊಳ್ಳಬೇಕು, ಅದರಿಂದ ಶೇಕಡ 25 ರಷ್ಟು ಹಣವನ್ನು ತುಂಬಿದಾಗ ಮಾತ್ರ ಅವುಗಳಿಗೆ ಅವಕಾಶ ಮಾಡಿಕೊಡುತ್ತೇವೆ ಎನ್ನುವುದು ಸರ್ಕಾರ ಆದೇಶದಿಂದ ಕೂಡಿರುವುದರಿಂದ ಅದನ್ನು ಕೂಡ ಮಾರ್ಪಡಿಸಿ, ಅದನ್ನು ಸುಲಭವಾಗಿ ಮಾಡುವಂತೆ ಮಾಡಬೇಕು. ಮುಖ್ಯವಾಗಿ ಈ ರಸ್ತೆಗಳ ಅಭಿವೃದ್ಧಿ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ವಿಶೇಷವಾಗಿ ಈ 14ನೇ ವಿಧಾನಸಭೆ ಸಂಘಟನೆಗೊಂಡ ನಂತರ 2 ನೇ ಬಾರಿಗೆ ಬೆಳಗಾವಿಯಲ್ಲಿ ವಿಶೇಷವಾದ ಈ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈ ಚರ್ಚೆಯನ್ನು ನಾಳೆ ಸ್ವಲ್ಪ ಹೊತ್ತಿಗೆ ಚರ್ಚೆ ಮಾಡುವುದಕ್ಕೆ ತೆಗೆದುಕೊಳ್ಳೋಣ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಒಪ್ಪಿದ್ದಾರೆ.

ಶ್ರೀ ಈಶ್ವರ್ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಕೇವಲ ಐದು ನಿಮಿಷ ನಮಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಈ ಭಾಗದ ಎರಡು ಮುಖ್ಯವಾದ ವಿಷಯ ಇದೆ.

(ಗೊಂದಲ)

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಗಳು ಬಹಳ ಇವೆ. ನಿಮಗೆ ನಾಳೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಈಗ ಗಮನ ಸೆಳೆಯುವ ಸೂಚನೆಗಳು.

9. ಗಮನ ಸೆಳೆಯುವ ಸೂಚನೆಗಳು

ವಿಷಯ : ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಕಳಸ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರನ್ನು ಒದಗಿಸಲು NRDWP ಯೋಜನೆಯಡಿ ಕೈಗೊಂಡಿರುವ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ.